ನಮ್ಮೊಳಗನ್ನು ಆನಂದದ ತುಂಬುನದಿಯಲ್ಲಿ ತೋಯಿಸಬಲ್ಲ ಹಲವು ಜಲಪಾತಗಳು ಯಲ್ಲಾಪುರದ ಸುತ್ತಮುತ್ತಲಿವೆ. ಜತೆಗೆ ಸೂರ್ಯಾಸ್ತವನ್ನು ಸವಿಯುವ ಗುಡ್ಡಗಳು, ಬೆಟ್ಟದ ನಡುವಣ ದೇಗುಲಗಳು ನಿಮ್ಮ ಮನಸ್ಸನ್ನು ತಾಜಾ ಆಗಿಸುವಷ್ಟು ಆಕರ್ಷಕವಾಗಿವೆ.

■ ಗುರುಗಣೇಶ ಭಟ್, ಡಬ್ಗುಳಿ

ಚಿತ್ರಗಳು: ಅಶ್ವಿನಿ ಕುಮಾರ್ ಭಟ್

# ಯಲ್ಲಾಪುರದಲ್ಲಿ ಏನೆಲ್ಲಾ ಇದೆ...

ಉತ್ತರ ಕನ್ನಡ ಜಿಲ್ಲೆಗೆ 'ಜಲಪಾತಗಳ ಸ್ವರ್ಗ' ಎನ್ನುವ ವಿಶೇಷಣ. ಈ ಬಿರುದಿಗೆ ಜಿಲ್ಲೆಯನ್ನು ಅರ್ಹಗೊಳಿಸಿದ್ದರಲ್ಲಿ ಯಲ್ಲಾಪುರ ತಾಲ್ಲೂಕಿನ ಪಾತ್ರ ಹಿರಿದು. ಈ ತಾಲ್ಲೂಕಿನ ಹಲವು ಜಲಪಾತಗಳು ಬೇಸಿಗೆಯಲ್ಲಿ ನಿಮ್ಮನ್ನು ಹಗುರಾಗಿಸುತ್ತವೆ.

ಬಿಸಿಲಿನಿಂದ ತಪ್ಪಿಸಿಕೊಂಡು ಎಲ್ಲಾದರೂ ಕಳೆದುಹೋಗಬೇಕು ಎಂದು ಯೋಚಿಸುತ್ತಿದ್ದರೆ ನೇರ ಯಲ್ಲಾಪುರಕ್ಕೆ ಎರಡು ದಿನದ ಮಟ್ಟಿಗಾದರೂ ಬರುವುದು ಸೂಕ್ತ. ಬೆಂಗಳೂರು ಅಥವಾ ರಾಜ್ಯದ ಇನ್ನಿತರ ನಗರಗಳಿಂದ ಯಲ್ಲಾಪುರಕ್ಕೆ ಬಸ್ ಸಂಪರ್ಕವಿದೆ. ಯಲ್ಲಾಪುರದಲ್ಲಿ ವಸತಿಗೆ ಉತ್ತಮ ಹೊಟೇಲ್‌ಗಳು ಸಹ ಲಭ್ಯವಿವೆ.

## ಸಾತೊಡ್ಡಿಯ ಜಲಸುಗ್ಗಿ

ಯಲ್ಲಾಪುರದಲ್ಲಿಯೇ ತಿಂಡಿತಿಂದು ಅವಶ್ಯಕತೆಯಿದ್ದಷ್ಟೇ ಲಗೇಜನ್ನು ತೆಗೆದುಕೊಂಡು ಹೊರಟರೆ ಸಾತೊಡ್ಡಿ ಜಲಪಾತ ನಿಮ್ಮನ್ನೇ ಎದುರುನೋಡುತ್ತಿರುತ್ತದೆ. ಯಲ್ಲಾಪುರದಿಂದ ಹುಬ್ಬಳ್ಳಿಗೆ ತೆರಳುವ ರಾಷ್ಟ್ರೀಯ ಹೆದ್ದಾರಿಯಲ್ಲಿ 3 ಕಿ.ಮೀ.ನಷ್ಟು ಮುಂದೆ ಸಾಗಿದರೆ ಅಲ್ಲಿ ಸಾತೊಡ್ಡಿ ಫಾಲ್ಸ್‌ಗೆ ಹೋಗುವ ದಾರಿ ಎಂಬ ಬೋರ್ಡ್ ಕಾಣಿಸುತ್ತದೆ. ಅಲ್ಲಿ ಎಡಕ್ಕೆ ತಿರುಗಿ 25 ಕಿ.ಮೀ. ಸಾಗಿದರೆ ಸಾತೋಡಿ ಜಲಪಾತ ಸಿಗುತ್ತದೆ. ಹಾ, ಜಲಪಾತದ ಬುಡದವರೆಗೂ ವಾಹನದಲ್ಲಿ ತೆರಳಲು ಸಾಧ್ಯವಿಲ್ಲ. 2 ಕಿ.ಮೀ.ನಷ್ಟು ಹಿಂದೆ ಗಾಡಿ ನಿಲ್ಲಿಸಿ, ಕಚ್ಚಾ ರಸ್ತೆಯಲ್ಲಿ ನಡೆದು ಜಲಪಾತದ ಬುಡವನ್ನು ತಲುಪಬೇಕು.

ಯಲ್ಲಾಪುರದಲ್ಲಿ ಬೆಳಗಿನ ಉಪಾಹಾರ ಸೇವಿಸಿಯೇ ಸಾತೊಡ್ಡಿಗೆ ತೆರಳುವುದು ಉತ್ತಮ. ದೇಹಳ್ಳಿ, ಬಳಗಾರ್ ಬಸ್ಸುಗಳ ಮೂಲಕ ಸಾತೊಡ್ಡಿಯನ್ನು ತಲುಪಬಹುದಾದರೂ ಬಸ್ಸುಗಳನ್ನೇ ನಂಬಿಕೊಳ್ಳುವಂತಿಲ್ಲ.

ಸಾತೊಡ್ಡಿಯ ದಾರಿಯಲ್ಲಿ ಪುರಾತನ ಗಣೇಶಗುಡಿ ಸಿಗುತ್ತದೆ. ಗಣೇಶನಿಗೊಂದು ಕೈಮುಗಿದು ಕ್ಷೇಮಕರ ಪ್ರವಾಸಕ್ಕಾಗಿ ಪ್ರಾರ್ಥಿಸಿ. ಏಕೆಂದರೆ ರಸ್ತೆಯ ಆರೋಗ್ಯ ಅಷ್ಟೇನೂ ಚೆನ್ನಾಗಿಲ್ಲ! ಸಳಸಳ ಹರಿಯುವ ಹಾವಿನ ಮೈಯಂತೆ ತಿರುವುಗಳಲ್ಲೇ ತೆರೆದುಕೊಳ್ಳುತ್ತ ಹೋಗುವ ರಸ್ತೆಯಲ್ಲಿ ಸಾಗುವಾಗ ಪಶ್ಚಿಮ ಘಟ್ಟದ ಹೊಟ್ಟೆಯೊಳಗೆ ಚಲಿಸುತ್ತಿರುವಂತೆ ಅನಿಸುತ್ತದೆ. ಜಲಪಾತಕ್ಕೆ ಹತ್ತಿರವಾದಂತೆ ಕಣ್ಣು ಹಾಯಿಸಿದಷ್ಟೂ ಕೊಡಸಳ್ಳಿಯ ಹಿನ್ನೀರಿನ ರಾಶಿ. ದಟ್ಟ ಅಡವಿಯ ನಡುವೆ ಪುಟ್ಟ ಕಾಲ್ದಾರಿ. ದೂರದಲ್ಲೆಲ್ಲೊ ಭೋ ಎಂಬ ಶಬ್ದ. ಜಲಪಾತದ ಬಳಿಗೆ ಕಲ್ಲು ದಿಬ್ಬಗಳಲ್ಲಿ ಎಚ್ಚರಿಕೆಯಿಂದ ಕಾಲಿಡುತ್ತ ನಡೆಯವಾಗ ಹಿತವಾದ ತಂಪಿನ ಸಿಂಚನ. ಸುಮಾರು 15 ಮೀಟರ್ ಎತ್ತರದಿಂದ ಧುಮುಕುವ ಜಲಪಾತದ ಮರ್ಮರವನ್ನು ಆಲಿಸುವುದೇ ಒಂದು ಧ್ಯಾನ. ಸಾತೊಡ್ಡಿ



ಈ ಹಸಿರ ಸಿರಿಯಲಿ... ಹಂತ ಹಂತವಾಗಿ ಇಳಿದು ಕಣಿವೆಯಲ್ಲಿ ಸಾಗುವ ಮಾಗೋಡ್ ಜಲಪಾತ